**ಕಥೆ ಅಂತ್ಯ ಹೀಗಿದೆ:**

ಪತ್ರ ಪ್ರಕರಣದ ಅರವತ್ತೊಂದನೇ ದಿನ ಹುಡುಗಿ ಅತ್ಯಂತ ದುಃಖದಿಂದಲೂ, ವಿಷಾದದಿಂದಲೂ, ನೋವಿನಿಂದಲೂ ಒಂದು ಪತ್ರ ಬರೆದು, ಇಡೀ ಪತ್ರ ಪ್ರೇಮ, ಪ್ರಣಯವನ್ನು ತ್ಯಜಿಸುವ ಮಾತುಗಳನ್ನಾಡಿದಳು. ಆ ಪತ್ರವನ್ನೇ ಇಲ್ಲಿ ಉದ್ಧರಿಸಿದರೆ ಕ್ಲೀಷೆಯಾಗದು ಎಂದುಕೊಳ್ಳುವೆ.

ಪ್ರೀತಿಯ ಕಥೆಗಾರ.

ಕ್ಷಮಿಸು, ನಿನಗೆ ನೋವು ಮಾಡುತ್ತಿರುವುದಕ್ಕೆ ಅಸಹನೀಯ ದುಃಖವಾಗುತ್ತಿದೆ. ನಿಜಕ್ಕೂ ನಾನು ನಿನ್ನ ಕಲ್ಪನೆಯ ಹುಡುಗಿಯಲ್ಲ. ನಿನ್ನ ಕಥೆ, ಚಿತ್ರ ವಿಳಾಸ ನೋಡಿ ನಿನ್ನಿಂದ ಲವ್ ಲೆಟರ್ ಬರೆಯಿಸುವೆ ಎಂದು ನನ್ನ ಫ್ರೆಂಡ್ಸ್ ಜೊತೆ ಬೆಟ್ ಕಟ್ಟಿದೆ. ಈ ತುಂಟಾಟದ ಪಂದ್ಯದಲ್ಲಿ ಗೆಲ್ಲುತ್ತಾ ಫ್ರೆಂಡ್‌ನಿಂದ ಹಣ ಪಡೆಯುತ್ತಾ ಹೋದೆ. ಆದರೆ ನಿಧಾನವಾಗಿ ಈ ಮಕ್ಕಳಾಟದ ಸ್ವರೂಪ ಬದಲಾಗತೊಡಗಿತು. ನಾವಿಬ್ಬರೂ ಹೊಸ ಹುಡುಕಾಟಕ್ಕೆ ಯತ್ನಿಸುತ್ತಿರುವಂತೆ ಭಾಸವಾಗತೊಡಗಿದೆ. ನಾವಿಬ್ಬರೂ ಉಡಾಯಿಸಿದ ಗಾಳಿಪಟಗಳು ಒಂದಕ್ಕೊಂದು ಮುಗಿಲಿನ ಅಂಚಿನಲ್ಲಿ ತಳಕು ಹಾಕಿಕೊಳ್ಳತೊಡಗಿವೆ. ಇನ್ನು ನಿನ್ನಲ್ಲಿ ಸತ್ಯವನ್ನು ಮರೆಮಾಚಲಾರೆ ಗೆಳೆಯ.

ಏನು ಮಾಡೋಣ, ನೀನು ಇಡೀ ಪಂದ್ಯದಲ್ಲಿ ದಯನೀಯವಾಗಿ ಸೋತುಬಿಟ್ಟೆ. ಈ ಬಗೆಯಲ್ಲಿ ನೀನು ಒಬ್ಬಳು ಅಪರಿಚಿತಳಿಗೆ, ಎಂದೂ ಕಾಣದ ಮುಖಕ್ಕೆ ತೆರೆದುಕೊಳ್ಳುವೆ ಎಂದುಕೊಂಡಿರಲಿಲ್ಲ. ನೀನೊಬ್ಬ ಮುಗ್ಧ ಹುಡುಗ. ಜಗತ್ತಿನ ಅಣುಅಣುವನ್ನೂ ಪ್ರೀತಿಸುವ ಜಾಯಮಾನ ಉಳ್ಳ ನೀನು ಭಾವುಕ ಜಗತ್ತಿನ ಕುಲಶ್ರೇಷ್ಠ ಕುಲಪುತ್ರನಾದ ನಿನಗೆ ಈ ಕಲ್ಪನೆಯಂಥ ಹುಡುಗಿ ಬಾಳಸಂಗಾತಿಯಾಗಿ ಒದಗಲಿ ಎಂದು ಹಾರೈಸುವೆ. ಇಡೀ ಪ್ರಕರಣವನ್ನು ಕೆಟ್ಟ ಕನಸೆಂದು ಮರೆತುಬಿಡು ನನ್ನ ಕಥೆಗಾರ.

ಅದಕ್ಕಿಂತ ಮುನ್ನ ನನ್ನನ್ನು ಕ್ಷಮಿಸು ಕಥೆಗಾರ. ನೀನು 'ಥ್ಯಾಂಕ್ಯೂ' ಎಂದಷ್ಟೇ ಬರೆದು ಈ ವಿಳಾಸಕ್ಕೊಂದು ಕಾರ್ಡು ಹಾಕಿದರೆ ಮುಗಿಯಿತು. ನೀನು ನನ್ನನ್ನು ಕ್ಷಮಿಸಿರುವೆ ಎಂದು ನೆಮ್ಮದಿಯಲ್ಲಿರುತ್ತೇನೆ.

ಕೈ ಮುಗಿದು ಬೇಡಿಕೊಳ್ಳುತ್ತೇನೆ. ನಿನ್ನ ಜೀವನ ಪೂರ್ತಿ ಅತ್ಯುತ್ತಮ ಗೆಳತಿಯಾಗಿ ಬದುಕುತ್ತೇನೆ. ನಿನ್ನನ್ನು ಬದುಕಿನುದ್ದಕ್ಕೂ ಗೌರವಿಸುತ್ತೇನೆ.

ಈ ವಾರದಲ್ಲಿ ಈ ಊರು ಬಿಡುತ್ತಿದ್ದೇನೆ. ನನ್ನ ನಿಜ ನಾಮಧೇಯವನ್ನಾಗಲಿ, ವಿಳಾಸವನ್ನಾಗಲಿ ತಿಳಿಸುವ ನೈತಿಕ ಧೈರ್ಯ ನನಗಿಲ್ಲ. ಕಥೆಗಾರ, ವೃಥಾ ನಿನ್ನ ಬದುಕಿನಲ್ಲಿ ಅಕ್ರಮವಾಗಿ ಪ್ರವೇಶಿಸಿ, ಚೆಲ್ಲಾಟವಾಡಿದೆ. ಮುಂದೆಂದೂ ಯಾರ ಜೊತೆಯೂ ಇಂಥ ತಪ್ಪು ಮಾಡಲಾರೆ. ನನ್ನನ್ನು ಕ್ಷಮಿಸು, ಕ್ಷಮಿಸು, ಕ್ಷಮಿಸು. ನಿನಗೆ ಶುಭವಾಗಲಿ.

ನಿನ್ನ

ಹುಡುಗ ಎಲ್ಲ ಪತ್ರಗಳನ್ನೂ ರಾಶಿ ಹಾಕಿದ. ಮೂಟೆ ಕಟ್ಟಿದ. ಮನೆಯ ಸಂದುಗೊಂದುಗಳಲ್ಲಿ ಮರಗಳ ಮರೆಯಲ್ಲಿ, ಕೋಣೆಯೊಳಗೆ ಕದಮುಚ್ಚಿ, ಹಾಸಿಗೆಯಲ್ಲಿ ಮುಸುಕು ಹೊದ್ದು ಓದಿ ಓದಿ ಹೃದಯ ತುಂಬಿದ ನೂರಾರು ಪತ್ರಗಳು... ಅವನ್ನೆಲ್ಲಾ ಒಂದೇ ಸಮನೆ ಮಡಚಿ, ಒಂದು ಲಕೋಟೆಯಲ್ಲಿ ತುಂಬಿ, ಹೊಲಿದ. ಆ ಮೂಟೆಯನ್ನು ಅಟ್ಟದ ಮೂಲೆಯಲ್ಲಿ ಇಟ್ಟು ಇನ್ನೆಂದೂ ಅದನ್ನು ಒಡೆಯಬಾರದೆಂದು ಶಪಥ ಹಾಕಿ ಏಣಿ ಇಳಿದು ಓಡೋಡಿ ಬಂದ ಮಗುವಿನ ಬಗೆಯ ಈ ಹುಡುಗ ತನ್ನ ಹಾಸಿಗೆಯಲ್ಲಿ ಮುಖ ಹುದುಗಿಸಿ ಬಿಕ್ಕಿ ಬಿಕ್ಕಿ ಅತ್ತ, ಆ ಅಳು ಆ ಹುಡುಗಿಗೆ ಕೇಳಿಸೀತಾದರೂ ಹೇಗೆ? ಪಾಪ!

❖